ಅಧ್ಯಕ್ಷರು: ನಿಮ್ಮ ಸದಸ್ಯರುಗಳಿಗೆ ಮೊದಲು ಸಭಾ ನಿಯಮಗಳನ್ನು ಪಾಲನೆ ಮಾಡುವುದನ್ನು ಕಲಿತುಕೊಳ್ಳಲಿಕ್ಕೆ ಹೇಳಿ. ಯಾವ ಸಮಯದಲ್ಲಿ ಎತ್ತಬೇಕೋ ಆಗ ಆ ವಿಷಯದ ಬಗ್ಗೆ ಪ್ರಸ್ತಾಪ ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈ ವಿಷಯ ಗಂಭೀರವಾಗಿರುವುದರಿಂದ ಪ್ರಶ್ನೋತ್ತರ ವೇಳೆಯ ನಂತರ ಅವಕಾಶವನ್ನು ಕೊಡಬೇಕು.

2. ಪ್ರಶ್ನೋತರಗಳು

ವಿಷಯ: ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 196(2713)

(ಮಾನ್ಯ ಸದಸ್ಯರು ಗೈರುಹಾಜರಿದ್ದರು)

ಶ್ರೀ ಜೆ.ಸಿ. ಮಾಧುಸ್ವಾಮಿ: ಪ್ರಶ್ನೆ ಸಂಖ್ಯೆ 2713 ರಲ್ಲಿರುವ ವಿಷಯವನ್ನು ಏನಾದರೂ ಮಾಡಿ ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಬೇಕು ಅಧ್ಯಕ್ಷರೇ, ಎಲ್ಲರಿಗೂ ಆಸಕ್ತಿಯಿರುವ ಬಹಳ ಗಂಭೀರವಾದ ವಿಷಯವಾಗಿದೆ.

ಅಧ್ಯಕ್ಷರು: ಆಗಬಹುದು, ಪ್ರಕಾಶ್‌ರವರೇ, ಈ ಪ್ರಶ್ನೆಯನ್ನು ಅರ್ಧ ಗಂಟೆಯ ಚರ್ಚೆಗೆ ಬದಲು ಮಾಡಬಹುದೇ?

ಶ್ರೀ ಎಂ.ಪಿ. ಪ್ರಕಾಶ್: ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಅನೇಕ ಸದಸ್ಯರು ಒಪ್ಪುತ್ತಾರೆ, ಆದಕಾರಣ ಇದನ್ನು ಅರ್ಧ ಗಂಟೆ ಚರ್ಚೆಗೆ ಬದಲು ಮಾಡಲಿಕ್ಕೆ ತಾವು ಒಪ್ಪುವುದಾದರೆ ನಮ್ಮದೇನೂ ಆಕ್ಷೇಪಣೆ ಇಲ್ಲ.

ಅಧ್ಯಕ್ಷರು: ಆಯಿತು, ಹಾಗಿದ್ದರೆ ಅರ್ಧಗಂಟೆ ಚರ್ಚೆಗೆ ಈ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 197(2919), 198(2712) ಮತ್ತು 199(2792)

(ಮಾನ್ಯ ಸದಸ್ಯರುಗಳು ಸದನದಲ್ಲಿ ಹಾಜರಿರಲಿಲ್ಲ)

ರಾಜ್ಯದಲ್ಲಿ 'ವ್ಯಾಟ್' ತೆರಿಗೆ ಪದ್ಧತಿ ಜಾರಿ

200 (2796) ಶ್ರೀ ಬಸವಣ್ಣೆಪ್ಪ ಜಿ. (ಹೊಳೆಹೊನ್ನೂರು): ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 'ವ್ಯಾಟ್' ತೆರಿಗೆ ಪದ್ಧತಿ ಎಂದಿನಿಂದ ಜಾರಿಗೆ ಬರುವುದು;

ಆ) ಈ ಪದ್ಧತಿಯಿಂದ ಒಂದು ವೇಳೆ ನಷ್ಟ ಉಂಟಾಗುವುದಾದರೆ ಇದರ ಪ್ರಮಾಣ ಎಷ್ಟು;

ಇ) ಈ ನಷ್ಟವನ್ನು ಕೇಂದ್ರ ಸರ್ಕಾರ ಭರಿಸುವುದೇ: ಹಾಗಿದ್ದಲ್ಲಿ, ವಿವರಗಳನ್ನು ನೀಡುವುದು;

ಈ) 'ವ್ಯಾಟ್' ಪದ್ಧತಿಯಿಂದ ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗುವುದೇ; ಹಾಗಾದರೆ, ಇದು ಜನತೆಗೆ ಹೊರೆ ಆಗುವುದಿಲ್ಲವೇ; ಒಂದು ವೇಳೆ ಹೊರೆ ಆದರೆ ಸರ್ಕಾರ ಅದನ್ನು ತಡೆಗಟ್ಟಲು ಕೈಗೊಳ್ಳುವ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಉಪಮುಖ್ಯ ಮಂತ್ರಿಗಳು):

ಅ) ದಿನಾಂಕ: 1.4.2005 ರಿಂದ 'ವ್ಯಾಟ್' ತೆರಿಗೆ ಪದ್ಧತಿ ರಾಜ್ಯದಲ್ಲಿ ಜಾರಿಗೆ ಬರುತ್ತದೆ.

ಆ) ನೂತನ ತೆರಿಗೆ ಪದ್ಧತಿಯನ್ನು ಜಾರಿಗೊಳಿಸುವುದರಿಂದ ರೂ.2160.00 ಕೋಟಿ ನಷ್ಟವಾಗುವುದೆಂದು ಅಂದಾಜು ಮಾಡಲಾಗಿದೆ.

ಇ) ಸದರಿ ನಷ್ಟವನ್ನು ಪೂರ್ಣ ಪ್ರಮಾಣದಲ್ಲಿ ಕೇಂದ್ರ ಸರ್ಕಾರವು 2005–06 ರಲ್ಲಿ ಭರಿಸುತ್ತದೆ. 2006–07 ಮತ್ತು 2007–08 ರಲ್ಲಿ ಉಂಟಾಗಬಹುದಾದ ನಷ್ಟದ ಶೇ.75 ಮತ್ತು ಶೇ.50 ಕೇಂದ್ರ ಸರ್ಕಾರ ಭರಿಸುವುದು.

ಈ) ವ್ಯಾಟ್ ಪದ್ಧತಿಯಿಂದ ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗುವುದಿಲ್ಲ. 'ವ್ಯಾಟ್' ಪದ್ಧತಿಯಲ್ಲಿ ಜನತೆಗೆ ಅನುಕೂಲವಾಗುವುದು. ಪ್ರಸ್ತುತ ತೆರಿಗೆ ಪದ್ಧತಿಗೆ ಹೋಲಿಸಿದರೆ ಮೌಲ್ಯವಾರ್ಧಿತ ತೆರಿಗೆ ಪದ್ಧತಿಯಲ್ಲಿ ಹೆಚ್ಚಿನ ತೆರಿಗೆ ಹೊರೆ ಜನ ಸಾಮಾನ್ಯರ ಮೇಲೆ ಬೀಳುವುದಿಲ್ಲ.

ಶ್ರೀ ಜಿ. ಬಸವಣ್ಣೆಪ್ಪ: ಮಾನ್ಯ ಅಧ್ಯಕ್ಷರೇ, ಭಾರತದಲ್ಲಿ ಎಷ್ಟು ರಾಜ್ಯಗಳು ಈ ವ್ಯಾಟ್ ಪದ್ಧತಿಗೆ ಒಳಪಟ್ಟಿವೆ? ಕೇಂದ್ರ ಸರ್ಕಾರ ವ್ಯಾಟ್ ಪದ್ಧತಿಯನ್ನು ಒಪ್ಪಿರುವುದರಿಂದ ರಾಜ್ಯಕ್ಕೆ ಆಗುವ ಅನುಕೂಲಗಳೇನು? ಕೇಂದ್ರ ಸರ್ಕಾರ ಮೂರು ವರ್ಷಗಳು ಮಾತ್ರ 'ವ್ಯಾಟ್' ನಿಂದ ಆಗುವ ನಷ್ಟವನ್ನು ಭರಿಸುತ್ತದೆ. ಉಳಿದ ವರ್ಷಗಳ ನಷ್ಟವನ್ನು ಹೇಗೆ ನಿಭಾಯಿಸಬೇಕು? ಎರಡನೇ ವರ್ಷದಿಂದ ಕೇಂದ್ರಸರ್ಕಾರ ನಷ್ಟವನ್ನು ಭರಿಸುವ ಪ್ರಮಾಣ ಕಡಿಮೆಯಿದೆ. 2005–06ನೇ ಸಾಲಿನಲ್ಲಿ ಅದಕ್ಕೆ ಅನುಗುಣವಾಗಿ ಪ್ರಪೋರ್ಷನೇಟ್ ಆಗಿ ಕೊಡುತ್ತಾರೆಯೇ ಅಥವಾ ಕಡಿಮೆ ಕೊಡುತ್ತಾರೆಯೇ? ಅದರ ಬಗ್ಗೆ ಹೇಳಬೇಕು.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ವ್ಯಾಟ್ ಅನ್ನು 1.4.2005 ರಿಂದ ಜಾರಿಗೆ ಕೊಡಬೇಕೆಂದು ಸರ್ಕಾರ ತೀರ್ಮಾನಿಸಿದೆ, ಆ ಬಗ್ಗೆ 2005–06ನೇ ಸಾಲಿನ ಆಯವ್ಯಯದಲ್ಲೂ ಕೂಡ ನಾನು ಪ್ರಸ್ತಾಪ ಮಾಡಿದ್ದೇನೆ. ಕಳೆದ ಅನೇಕ ವರ್ಷಗಳಿಂದ ರಾಷ್ಟ್ರ ಮಟ್ಟದಲ್ಲಿ ಈ ವ್ಯಾಟ್ ಪದ್ಧತಿಯನ್ನು ಜಾರಿಗೊಳಿಸುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ; ವ್ಯಾಟ್ ಪದ್ಧತಿಯನ್ನು ಜಾರಿಗೊಳಿಸಲು ಒಂದು ಎಂಪವರ್ಡ್ ಕಮಿಟಿ ಕೂಡ ರಚನೆಯಾಯಿತು. ಆ ಕಮಿಟಿಯಲ್ಲಿ ಎಲ್ಲಾ ರಾಜ್ಯಗಳ ಹಣಕಾಸಿನ ಸಚಿವರುಗಳು ಸಹ ಇದ್ದಾರೆ. ರಾಜ್ಯಗಳ ಹಣಕಾಸಿನ ಸಚಿವರುಗಳ ಪೈಕಿ ವೆಸ್ಟ್‌ಬೆಂಗಾಲ್‌ನ ಹಣಕಾಸಿನ ಸಚಿವರು ಆ ಕಮಿಟಿಯ ಅಧ್ಯಕ್ಷರಾಗಿದ್ದಾರೆ. ಶ್ರೀ ಹಾಸೀಮ್ ದಾಸ್‌ಗುಪ್ತ ಅವರ ಅಧ್ಯಕ್ಷತೆಯಲ್ಲಿ ಈ ವ್ಯಾಟ್ ಬಗ್ಗೆ ಅನೇಕ ಸಾರಿ ಚರ್ಚೆಗಳು ನಡೆದಿವೆ. ಈ ಕಮಿಟಿಯಲ್ಲಿ ಕೇಂದ್ರಸರ್ಕಾರದ ಅನೇಕ ಅಧಿಕಾರಿಗಳು ಸಹ ಇದ್ದಾರೆ. ನಾನು ಒಂದೆರಡು ಸಾರಿ ಆ

ಸಭೆಗಳಿಗೆ ಹೋಗಿದ್ದೇನೆ. ನಮ್ಮ ಅಧಿಕಾರಿಗಳೂ ಕೂಡ ಆ ಎಲ್ಲಾ ಸಭೆಗಳಿಗೂ ಹಾಜರಾಗಿದ್ದಾರೆ. ಉತ್ತರ ಪ್ರದೇಶದವರು ಮಾತ್ರ ನಾವು ವ್ಯಾಟ್‌ಗೆ ಬರುವುದಿಲ್ಲ ಈ ವರ್ಷದಿಂದ ಅಂದರೆ 2005–06 ರಿಂದ ನಾವು ವ್ಯಾಟ್‌ನ್ನು ಜಾರಿಗೆ ಕೊಡುವುದಿಲ್ಲವೆಂದು ಹೇಳಿದರು. ಉಳಿದವರು ಎಲ್ಲರೂ ಕೂಡ ಎಂಪವರ್ಡ್ ಕಮಿಟಿಯಲ್ಲಿ 1.4.05 ರಿಂದ ಜಾರಿಗೆ ಕೊಡುತ್ತೇನೆಂದು ಒಪ್ಪಿಕೊಂಡಿದ್ದಾರೆ. ಆಮೇಲೆ ಇತ್ತೀಚೆಗೆ ರಾಜಾಸ್ಥಾನ, ಮಧ್ಯಪ್ರದೇಶ ಆಮೇಲೆ ಚತ್ತೀಸ್‌ಘಡ್, ಜಾರ್ಖಂಡ್, ಗುಜರಾತ್ ಇವು ಬಿ.ಜೆ.ಪಿ. ರೂಲ್ಡ್ ಸ್ಟೇಟ್ಸ್ ಏನಿವೆ, ಇವರು ಇದು ಯೂನಿಫಾರಂ ಟ್ಯಾಕ್ಸ್ ಆಗುವುದಿಲ್ಲ. ಎಲ್ಲಾ ರಾಜ್ಯಗಳವರೂ ಒಪ್ಪಿಕೊಂಡಿಲ್ಲ ಎಂದು ನೆಪ ಹಾಕಿ ತೀರ್ಮಾನ ಮಾಡಿದ್ದಾರೆ. ಅಲ್ಲಿ ಬಿ.ಜೆ.ಪಿ. ಪಕ್ಷದ ಹಣಕಾಸಿನ ಮಂತ್ರಿಗಳೆಲ್ಲಾ ಸೇರಿ ತೀರ್ಮಾನ ಮಾಡಿದ್ದಾರೆ. ಈ ದಕ್ಷಿಣ ಭಾರತದ ರಾಜ್ಯಗಳಲ್ಲಿ ತಮಿಳುನಾಡು ಮಾತ್ರ ಇನ್ನೂ ತೀರ್ಮಾನ ಮಾಡಿಲ್ಲ. ಅವರು ಏನು ನಿಲುವು ತಎಗೆದುಕೊಂಡಿದ್ದಾರೆಂದರೆ, ನಾವೆಲ್ಲಾ ರಾಜಕೀಯ ಪಕ್ಷಗಳನ್ನು ಸೇರಿಸಿ ಒಂದು ಸಮಿತಿ ಮಾಡಿ ಕೊಂಡಿದ್ದೇವೆ. ಜೊತೆಗೆ ವ್ಯಾಟ್ ಬಿಲ್ ಕೂಡ ನಾವು ಅಸೆಂಬ್ಲಿಯಲ್ಲಿ ಮಂಡಿಸಿದ್ದೇವೆ. ಎಲ್ಲಾ ಪಕ್ಷಗಳೂ ಕೂಡ ಒಂದು ಒಮ್ಮತದ ತೀರ್ಮಾನಕ್ಕೆ ಬಂದರೆ, ನಾವು ಈ ವ್ಯಾಟನ್ನು ಜಾರಿ ಮಾಡುತ್ತೇವೆನ್ನುವ ನಿಲುವನ್ನು ಅವರು ತಾಳಿದ್ದಾರೆ. ಕೇರಳ, ಪಾಂಡಿಚೇರಿ, ಆಂಧ್ರ, ಮಹಾರಾಷ್ಟ್ರ, ಒರಿಸ್ಸಾ, ಹರಿಯಾಣ, ಪಂಜಾಬ್, ನಾರ್ತ್ ಈಸ್ಟ್ ಸ್ಟೇಟ್ಸ್, ವೆಸ್ಟ್ ಬೆಂಗಾಲ್, ಅಸ್ಸಾಂ ಇವೆಲ್ಲವೂ ಕೂಡ ವ್ಯಾಟ್ ಜಾರಿ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ನಾವು ಕೂಡ ತೀರ್ಮಾನ ಮಾಡಿದ್ದೇವೆ. ಇದು ನಿಮ್ಮ ಮೊದಲನೇ ಪ್ರಶ್ನೆಗೆ ಉತ್ತರ. ಎರಡನೆಯದು, ಮೂರು ವರ್ಷಗಳಿಗೆ ಮಾತ್ರ ಅವರು ಪರಿಹಾರ ಕೊಡುತ್ತೇವೆಂದು ಹೇಳಿದ್ದಾರೆ. ಉಳಿದ ವರ್ಷಗಳಿಗೆ ಏನು ಮಾಡುತ್ತೀರಿ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಕೇಂದ್ರದ ಹಣಕಾಸು ಸಚಿವರಾದ ಮಾನ್ಯ ಚಿದಂಬರಂರವರು ಎಂಪವರ್ಡ್ ಕಮಿಟಿಯಲ್ಲಿ ಚರ್ಚೆ ಮಾಡಿ, ನಾವು ಒಂದು ತೀರ್ಮಾನಕ್ಕೆ ಏನು ಬಂದಿದ್ದೇವೆ, ಮೊದಲನೇ ವರ್ಷ ನಷ್ಟವಾದದ್ದು, ಮೂರರಷ್ಟು ಭರಿಸಿಕೊಡಬೇಕು. ಆಯಾ ರಾಜ್ಯಗಳಲ್ಲಿ ಎಷ್ಟೆಷ್ಟು ನಷ್ಟವಾಗುತ್ತದೆ, ಅದರ ಮೂರರಷ್ಟು ಭರಿಸಿಕೊಡಬೇಕು. ಎರಡನೇ ವರ್ಷ ಒಟ್ಟು ನಷ್ಟದಲ್ಲಿ 75 ರಷ್ಟು ರಾಜ್ಯಗಳಿಗೆ ಕೊಡಬೇಕು. ಮೂರನೇ ವರ್ಷ ನಷ್ಟ ಸಂಭವಿಸುವುದರಲ್ಲಿ ಅರ್ಧದಷ್ಟು ಕೊಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಕೇಂದ್ರಸರ್ಕಾರ ಒಪ್ಪಿಗೆ ಕೊಟ್ಟು, ಮುಂದಿನ ವರ್ಷದ ಆಯವ್ಯಯದಲ್ಲಿ ಕೂಡ ಇದನ್ನು ಅವರು ಒಪ್ಪಿಕೊಂಡಿದ್ದಾರೆ. ನಾವು ಈ 2005–06ನೇ ಸಾಲಿಗೆ 2,160 ಕೋಟಿ ರೂ.ಗಳನ್ನು ನಷ್ಟ ಸಂಭವಿಸಬಹುದು ಎಂದು ಲೆಕ್ಕಹಾಕಿದ್ದೇವೆ. ಎಂಪವರ್ಡ್ ಕಮಿಟಿಯಲ್ಲಿ ಏನು ತೀರ್ಮಾನವಾಗಿದೆಯೆಂದರೆ, 2004–05 ಸೇರಿ ಈ ಐದು ವರ್ಷಗಳಲ್ಲಿ ಮೊದಲ ಮೂರು ವರ್ಷಗಳಲ್ಲಿ ಸರಾಸರಿ ಯಾವುದೇ ಬರುತ್ತದೆ, ಆ ನಷ್ಟವನ್ನು ಕೊಡಬೇಕೆಂದು ನಾವು ಹೇಳಿದ್ದೇವೆ. ಅದರ ಪ್ರಕಾರವೇ ಅವರು ಒಪ್ಪಿಕೊಂಡಿರತಕ್ಕಂಥಾದ್ದು. ಹಾಗಾಗಿ, ನಾವು 2160 ಕೋಟಿ ರೂಪಾಯಿಗಳಷ್ಟು ನಷ್ಟ ಸಂಭವಿಸಬಹುದೆಂದು ಹೇಳಿದ್ದೇವೆ. ಇವತ್ತು ಕೇಂದ್ರ ಸರ್ಕಾರದ ಆರ್ಗ್ಯುಮೆಂಟ್ ಏನಿದೆಯೆಂದರೆ, ವ್ಯಾಟ್ ಪದ್ಧತಿಗೆ ಹೋಗುವುದರಿಂದ ಅಷ್ಟೊಂದು ದೊಡ್ಡ

ಪ್ರಮಾಣದಲ್ಲಿ ನಷ್ಟ ಆಗುವುದಿಲ್ಲ. ಏಕೆಂದರೆ, ಲೀಕೇಜ್ ಎಲ್ಲಾ ಕಡಿಮೆಯಾಗುತ್ತದೆ. ಎಲ್ಲಾ ವ್ಯಾಪಾರಿಗಳು, ಟ್ರೇಡರ್ಸ್ ಕ್ಯಾಪಿಟಲ್ ಗೂಡ್ಸ್‌ಗೆ ಕೊಟ್ಟಂಥ ತೆರಿಗೆ ಇನ್‌ಪುಟ್ಸ್‌ಗೆ ಕೊಟ್ಟಂಥ ಟ್ಯಾಕ್ಸ್ ಇವುಗಳಿಗೆಲ್ಲಾ ರಸೀತಿ ಕೊಡಬೇಕಾಗುತ್ತದೆ. ಏಕೆಂದರೆ, ಅವರಿಗೆ ರಿಬೇಟ್ ಇರುತ್ತದೆ. ಆ ರಿಬೇಟ್ ಇರುವುದರಿಂದ ಅಕೌಂಟ್ಸ್ ಮೆಯಿನ್‌ಟೇನ್ ಮಾಡಲೇಬೇಕಾಗುತ್ತದೆ. ಅಕೌಂಟ್ಸ್ ಮೆಯಿನ್‌ಟೇನ್ ಮಾಡುವುದರಿಂದ ಸೋರಿ ಹೋಗುವುದೂ ಕಡಿಮೆಯಾಗುತ್ತದೆ. ಟ್ರೇಡರ್ಸ್‌ಗೆಲ್ಲಾ ಸೆಲ್ಫ್ ಅಸೆಸ್‌ಮೆಂಟ್ ಇರುವುದರಿಂದ, ಅವರಿಗೆ ತೊಂದರೆ ಕೂಡ ಆಗುವುದಿಲ್ಲ. ಮತ್ತೆ ನಾವು ರಿಬೇಟ್ ಕೊಡುವುದರಿಂದ ಮತ್ತು ಎರಡೇ ರೇಟ್‌ಗಳಿರುವುದರಿಂದ, ಅಂದರೆ ನಾಲ್ಕು ಮತ್ತು ಹನ್ನೆರಡೂವರೆ ರೇಟ್ ಇರುವುದರಿಂದ ಹಾಗೂ ರಿಬೇಟ್ ಸಿಕ್ಕುವುದರಿಂದ ಕನ್‌ಸ್ಯೂಮರ್ಸ್‌ಗೂ ಕೂಡ ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗುವುದಿಲ್ಲ ಎನ್ನುವ ಕಾರಣಕ್ಕೋಸ್ಕರ ಇವೆಲ್ಲಾ ಚರ್ಚೆಯಾಗಿ ಈ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಈ ಎಂಪವರ್ಡ್ ಕಮಿಟಿ ಇದೆಯಲ್ಲ, ಇದು ಆಗಾಗ ಭೇಟಿ ಮಾಡುತ್ತಿರುತ್ತದೆ. ಅದರ ಸಾಧಕ ಬಾಧಕಗಳನ್ನೆಲ್ಲಾ ಚರ್ಚೆ ಮಾಡುತ್ತಿರುತ್ತಾರೆ. ಅದರಿಂದ ಅಗತ್ಯಕ್ಕಿಂತ ತೊಂದರೆಗಳೇನು ಅಥವಾ ನಮಗೆ ಅಲ್ಲಿ ಅಡಚಣೆಗಳು ಏನೇನು ಬರುತ್ತದೆ, ಅವುಗಳನ್ನು ಹೇಗೆ ನಿವಾರಣೆ ಮಾಡಿಕೊಳ್ಳಬೇಕು, ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡಬೇಕಾದರೆ, ಎಂಪವರ್ಡ್ ಕಮಿಟಿ ಯಾವ ಯಾವ ಹಂತದಲ್ಲಿ ಮಾಡಬೇಕಾಗುತ್ತದೆ, ಹಣಕಾಸಿನ ಸಚಿವರಿಗೆ ಮತ್ತು ಬೇರೆ ಬೇರೆ ಅಧಿಕಾರಿಗಳಿಗೆ ಕರೆದು ಮಾತನಾಡತಕ್ಕಂಥಾದ್ದು, ಇದೆಲ್ಲ ಮಾಡಿ ರಾಜ್ಯಗಳ ಹಣಕಾಸಿನ ಮಂತ್ರಿಗಳ ಜೊತೆಯಲ್ಲಿ, ಸೆಕ್ರಟರಿಗಳ ಜೊತೆಯಲ್ಲಿ ಮತ್ತೆ ಕಮರ್ಷಿಯಲ್ ಟ್ಯಾಕ್ಸ್ ಅಫೀಸರುಗಳ ಜೊತೆಯಲ್ಲಿ ಮಾತನಾಡಲಿಕ್ಕೋಸ್ಕರವೇ ಈ ಎಂಪವರ್ಡ್ ಕಮಿಟಿ ಮುಂದುವರಿಯುತ್ತದೆ. ಇದು ಆಗಿಂದಾಗ್ಗೆ ಭೇಟಿ ಮಾಡಿ, ಇದರ ಸಾಧಕ ಬಾಧಕಗಳನ್ನು ಚರ್ಚೆ ಮಾಡುತ್ತದೆ. ಮೂರು ವರ್ಷಗಳಲ್ಲಿ, ಮೊದಲನೇ ವರ್ಷ ಯಾವ ರೀತಿಯಾಗುತ್ತದೆ ಎಂಬುದು ಗೊತ್ತಾಗುತ್ತದೆ. ಆಮೇಲೆ ಎರಡನೇ ವರ್ಷ ಮತ್ತು ಮೂರನೇ ವರ್ಷ ಹೀಗೆ ನಮ್ಮ ಅನುಭವಗಳ ಆಧಾರದ ಮೇಲೆ ಏನೇನು ಬದಲಾವಣೆಗಳನ್ನು ಮಾಡಿಕೊಳ್ಳಬೇಕು, ಏನೇನು ತಿದ್ದುಪಡಿಗಳನ್ನು ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ಕೂಡ ನಾವು ಆಗಿಂದ್ಹಾಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಬಸವಣ್ಣೆಪ್ಪ: ಈ ವ್ಯಾಟ್ ಪದ್ಧತಿ ಜಾರಿಗೆ ಬರುವುದರಿಂದ ಅಗತ್ಯ ವಸ್ತುಗಳ ಬೆಲೆ ಏರುವುದಿಲ್ಲವೇ? ಇದು ಅತಿ ಮುಖ್ಯವಾದುದು. ಅಗತ್ಯ ವಸ್ತುಗಳ ಬೆಲೆ ಏರಿದರೆ ಬಡವರ ದಿನನಿತ್ಯದ ಸಮಸ್ಯೆಯಾಗುತ್ತದೆ. ಇದನ್ನು ಸರಿಪಡಿಸಲು ಏನು ಕ್ರಮ ಕೈಗೊಳ್ಳುತ್ತೀರಿ. ಜೊತೆಗೆ ಈ ಔಷಧಿ ವಸ್ತುಗಳ ಮೇಲೆ ವ್ಯಾಟ್‌ನಿಂದ ತೆರಿಗೆ ಇಳಿಕೆ ಪ್ರಮಾಣ ಎಷ್ಟು? ಹೆಚ್ಚು ಕಡಿಮೆ 14 ಪರ್ಸೆಂಟ್‌ನಿಂದ 4 ಪರ್ಸೆಂಟಿಗೆ ಇಳಿಯುತ್ತದೆಂದು ತಿಳಿದುಬಂದಿದೆ. ಈ ರೀತಿ ತೆರಿಗೆ ಇಳಿಸುವುದರಿಂದ ವಹಿವಾಟುದಾರರಿಗೆ ತೊಂದರೆಯಾಗುವುದಿಲ್ಲವೇ? ಅಗತ್ಯ ವಸ್ತುಗಳ ಬೆಲೆ

ಏರುವುದರ ಬಗ್ಗೆ ನೀವೇನು ಕ್ರಮ ತೆಗೆದುಕೊಳ್ಳುತ್ತೀರಿ? ಈ ತೆರಿಗೆ ಬಹಳ ಇಳಿಕೆಯಾಗುವುದರಿಂದ ವಹಿವಾಟುದಾರರಿಗೆ ತೊಂದರೆಯಾಗುವುದಿಲ್ಲವೇ

ಶ್ರೀ ಸಿದ್ಧರಾಮಯ್ಯ: ಮಾನ್ಯ ಬಸವಣ್ಣನವರೇ, ಇದನ್ನು ಎಲ್ಲರೂ ಸ್ವಾಗತ ಮಾಡಿದ್ದಾರೆ. ಯಾರೋ ಕೆಲವು ಅಕೌಂಟ್ಸ್ ಮೆಯಿನ್‌ಟೇನ್ ಮಾಡಬೇಕಾಗುತ್ತದೆ, ರಸೀತಿ ಕೊಡಬೇಕಾಗುತ್ತದೆ, ಈ ತರಹದವರು ಕೆಲವರು ಇದ್ದಾರೆ. ಮತ್ತೆ ಕೆಲವರು ಇನ್‌ಕಮ್ ಟ್ಯಾಕ್ಸ್‌ಗೆಲ್ಲ ಸಿಕ್ಕಿಹಾಕಿಕೊಳ್ಳುತ್ತಾರೆ. ಆ ತರಹದ ಕೆಲವು ವಿರೋಧಗಳು ಇವೆ. ಹಾಗಾಗಿ ವಿರೋಧಗಳು ಇದೆಯೇ ಹೊರತು ಬೈ ಅಂಡ್ ಲಾರ್ಜ್ ಟ್ರೇಡ್ ಬಾಡೀಸ್, ವಾಣಿಜ್ಯ ಸಂಸ್ಥೆಗಳು ಎಲ್ಲವೂ ಕೂಡ ಸ್ವಾಗತ ಮಾಡಿವೆ. ಇದು ಪ್ರಗತಿಪರವಾದ ಒಂದು ತೆರಿಗೆ ಪದ್ಧತಿ ಎನ್ನತಕ್ಕಂಥಾದ್ದು ಜಗತ್ತಿನಲ್ಲಿ ಮತ್ತು ನಮ್ಮ ರಾಷ್ಟ್ರದಲ್ಲಿ ಇರತಕ್ಕಂಥ ಅನುಭವ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈಗ ಉದ್ಭವವಾಗಿರತಕ್ಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಎಂಪವರ್ಡ್ ಕಮಿಟಿ ತಕ್ಷಣ ಸಭೆ ಸೇರುವುದಕ್ಕೆ ಏನಾದರೂ ಯೋಚನೆ ಮಾಡಿದೆಯೇ? ಅದರ ಹಿನ್ನೆಲೆಯಲ್ಲಿ ರಾಜ್ಯದ ನಿಲುವು ಏನು? ಈಗ ಉದ್ಭವಾಗಿರತಕ್ಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಎಂಪವರ್ಡ್ ಕಮಿಟಿ ತಕ್ಷಣ ಸಭೆ ಸೇರಿ ಏನಾದರೂ ನಿರ್ಧಾರ ಮಾಡುವಂಥಾದ್ದು ಸರ್ಕಾರಕ್ಕೆ ಮಾಹಿತಿ ಇದೆಯೇ ಮತ್ತು ಇಂತಹ ಸಂದರ್ಭದಲ್ಲಿ ರಾಜ್ಯದ ನಿಲುವು ಏನು? ಏಕೆಂದರೆ, ಮೊದಲಿನಿಂದಲೂ ತಮಿಳುನಾಡು, ಉತ್ತರಪ್ರದೇಶ ರಾಜ್ಯಗಳವರು ಇದನ್ನು ಸ್ವೀಕರಿಸಿಯೇ ಇಲ್ಲ. ಅದಕ್ಕಾಗಿ, ಇಂತಹ ಪರಿಸ್ಥಿತಿಯಲ್ಲಿ ರಾಜ್ಯದ ನಿಲುವೇನು ಎನ್ನುವುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಎನ್. ಯೋಗೀಶ್ ಭಟ್: ಸನ್ಮಾನ್ಯ ಅಧ್ಯಕ್ಷರೇ ಅದರ ಜತೆಯಲ್ಲಿ ಬಿ.ಜೆ.ಪಿ. ವ್ಯಾಟ್ ಪ್ರಗತಿಪರ ಎಂದು ಹೇಳುವುದನ್ನು ಸ್ವಾಗತ ಮಾಡಿದೆ. ಆದರೆ ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಇದರ ಜೊತೆ ಜೊತೆಯಲ್ಲಿ ಅಳವಡಿಸಿರುವುದರ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸಿದೆ. ಸಿ.ಎಸ್.ಟಿ. ಯನ್ನು ಅಳವಡಿಸುವುದರ ಬಗ್ಗೆ ರಾಜ್ಯಸರ್ಕಾರದ ತಮ್ಮ ನಿಲುವೇನು? ಅದನ್ನು ರದ್ದುಪಡಿಸಬೇಕೆಂಬುದು ನಮ್ಮ ಸ್ಟ್ಯಾಂಡ್.

ಶ್ರೀ ಸಿದ್ಧರಾಮಯ್ಯ: ನನಗೆ ನೆನಪಿರುವ ರೀತಿಯಲ್ಲಿ ಬಿ.ಜೆ.ಪಿ. ಯಾವ ಯಾವ ರಾಜ್ಯಗಳಲ್ಲಿದೆ, ಆ ರಾಜ್ಯಗಳ ಹಣಕಾಸಿನ ಮಂತ್ರಿಗಳೂ ಕೂಡ ಈ ಎಂಪವರ್ಡ್ ಕಮಿಟಿಯಲ್ಲಿ ಇದ್ದರು. ತಮಿಳುನಾಡಿನ ಹಣಕಾಸಿನ ಮಂತ್ರಿಗಳೂ ಕೂಡ ಇದ್ದರು. ಇದರ ಮೇಲೆ ನಾವು ವೈಟ್ ಪೇಪರ್ ಪಬ್ಲಿಷ್ ಮಾಡಿದೆವಲ್ಲಾ, ಚಿದಂಬರಂ ಅವರ ಹತ್ತಿರ ಸಬ್‌ಮಿಟ್ ಮಾಡಿದಾಗ ನಿಮ್ಮ ಪಕ್ಷದ ಹಣಕಾಸಿನ ಮಂತ್ರಿಗಳೂ ಇದ್ದರು. ಆಮೇಲೆ, ಅವರು ಏಕೋ ಸ್ವಲ್ಪ ಹಿಂದೇಟು ಹೊಡೆದಿದ್ದಾರೆ. ಮತ್ತೆ ಏನು ಸಮಸ್ಯೆ ಉದ್ಭವವಾಗಿದೆ ಎಂಬುದು ನನಗೆ ಅರ್ಥವಾಗಲಿಲ್ಲ. ಸಮಸ್ಯೆಯೇ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಆದರೆ ಅನೇಕ ರಾಜ್ಯಗಳು ಈಗ ಒಪ್ಪಿಕೊಳ್ಳುತ್ತಾ ಇಲ್ಲ.

ಶ್ರೀ ಸಿದ್ಧರಾಮಯ್ಯ: ಅವರೂ ಒಪ್ಪಿಕೊಳ್ಳುತ್ತಾರೆ. ಬೇರೆ ದಾರಿಯೇ ಇಲ್ಲ. ಅವರೂ ಅಲ್ಲಿಗೆ ಬರಬೇಕು. ಮಾನ್ಯ ಸದಸ್ಯರು ಸಿ.ಎಸ್.ಟಿ. ಅಳವಡಿಸುವ ಬಗ್ಗೆ ಕೇಳುತ್ತಾರೆ. ಸಿ.ಎಸ್.ಟಿ. ಬಗ್ಗೆ ಕೂಡ ಸುದೀರ್ಘವಾಗಿ ಚರ್ಚೆಯಾಗಿದೆ. ಮೊದಲನೇ ವರ್ಷವೇ ಸಿ.ಎಸ್.ಟಿ. ತೆಗೆಯುವುದು ಬೇಡ, ಮೊದಲನೇ ವರ್ಷ ಇಟ್ಟುಕೊಳ್ಳೋಣ. ಆಮೇಲೆ ಫೇಸ್ಡ್ ಮ್ಯಾನರ್‌ನಲ್ಲಿ ಅದನ್ನು ತೆಗೆಯಬೇಕು ಎನ್ನತಕ್ಕಂಥಾದ್ದು ಇದೆ. ಈಗ ಮೊದಲನೇ ವರ್ಷ 4 ಪರ್ಸೆಂಟ್ ಇದೆ. ಎರಡನೇ ವರ್ಷ ಅದನ್ನು 2 ಪರ್ಸೆಂಟ್ ಮಾಡಬೇಕು. ಆಮೇಲೆ ಜೀರೋ ಪರ್ಸೆಂಟ್‌ಗೆ ಹೋಗಬೇಕು ಎನ್ನತಕ್ಕಂಥಾದ್ದು. This decision was taken in the empowered Committee for which the Finance Ministers of Gujarat, Madhya Pradesh and Rajasthan are also parties. ಆಯಿತಲ್ಲಾ, ಇದು ಒಂದು. ನಿಮ್ಮವರು ಏನು ಹೇಳುತ್ತಾರೆ ಅಂದರೆ ನಮ್ಮ ಟ್ರೇಡ್ ಬಿಜಿನೆಸ್‌ಗೆ ಎಲ್ಲಾ ಯು.ಪಿ. ಮೇಲೆ ನಾವು ಬಹಳ ಡಿಪೆಂಡ್ ಆಗಿದ್ದೇವೆ, ಯು.ಪಿ. ಯವರು ಬರುತ್ತಿಲ್ಲ ಅದಕೋಸ್ಕರ ನಾವು ಬರುತ್ತಿಲ್ಲ ಅಂತ. ಅದಕ್ಕೂ ನಮಗೂ ಸಂಬಂಧ ಇಲ್ಲ. ಯು.ಪಿ. ಯವರು ಬಂದ ಮೇಲೆಯೇ ಅವರು ಬರಲಿ, ಬಹುಶಃ ಎಲ್ಲರೂ ಸೇರಬೇಕು ಎನ್ನತಕ್ಕಂಥಾದ್ದು ಎಲ್ಲರೂ ಒಪ್ಪಿಕೊಂಡಿರತಕ್ಕಂಥಾದ್ದು. ಮಾನ್ಯ ಅಧ್ಯಕ್ಷರೇ ಇದು ಮೊದಲು ತೀರ್ಮಾನ ಮಾಡಿದ್ದೇವೆ, ಎಲ್ಲಾ ಸಿದ್ಧತೆಗಳು ಆಗಿವೆ, ತಮಿಳುನಾಡಿನವರು ಸಹ ಬರುತ್ತಾರೆ ಎನ್ನತಕ್ಕಂಥ ಮಾಹಿತಿ ಇದೆ. ಅವರೂ ಬರುತ್ತಾರೆ. ಹೊಸ ಪದ್ಧತಿಯಲ್ಲಿ ಮೊದಲನೇ ವರ್ಷ ನೋಡೋಣ. ಹರಿಯಾಣದವರು ಎರಡು ವರ್ಷಗಳಿಂದ ಮಾಡಿದ್ದಾರೆ. Their experience is that this is better than sales tax ಎಲ್ಲಾ ದೃಷ್ಟಿಯಿಂದ, ಟ್ರೇಡರ್ಸ್ ದೃಷ್ಟಿಯಿಂದ ಕನ್‌ಸ್ಯೂಮರ್ಸ್ ದೃಷ್ಟಿಯಿಂದ, ರಾಜ್ಯ ಸರ್ಕಾರದ ಆದಾಯದ ದೃಷ್ಟಿಯಿಂದ ಇದು ಬೆಟರ್ ಸಿಸ್ಟಂ ಅಂತ ಹರಿಯಾಣದವರು ಹೇಳುತ್ತಾರೆ. ಈಗಾಗಲೇ ಅವರು ಎರಡು ವರ್ಷಗಳಿಂದ ವ್ಯಾಟ್ ಜಾರಿ ಮಾಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಉಳಿದ ರಾಜ್ಯದವರು ಯಾರು ಏನು ಮಾಡಿದರೂ ನಮ್ಮಲ್ಲಿ ಏಪ್ರಿಲ್ ಒಂದರಿಂದ ಜಾರಿಗೆ ಬಂದೇ ಬರುತ್ತದೆಯೇ ಹಾಗಾದರೆ?

ಶ್ರೀ ಸಿದ್ಧರಾಮಯ್ಯ: ಹೌದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಹಾಗಾದರೆ ದೇಶದ ಉಳಿದ ರಾಜ್ಯದವರು ಅವರು ಏನು ಬೇಕಾದರೂ ಮಾಡಿದರೂ ನಮ್ಮ ರಾಜ್ಯದಲ್ಲಿ ಇದು ಏಪ್ರಿಲ್ ಒಂದರಿಂದ ಜಾರಿಗೆ ಬಂದೇ ಬರುತ್ತದೆಯೇ?

ಶ್ರೀ ಸಿದ್ಧರಾಮಯ್ಯ: ಅವರು ಏನು ಮಾಡಿದ್ದಾರೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಏಪ್ರಿಲ್ ಒಂದರಿಂದ ಇದನ್ನು ಅಳವಡಿಸಿಕೊಳ್ಳಲು ಕೆಲವರು ಸಿದ್ದರಿಲ್ಲ ಎಂದು ಹೇಳಿದ್ದಾರೆ. ತಮಿಳುನಾಡಿನವರು....

ಶ್ರೀ ಸಿದ್ಧರಾಮಯ್ಯ: ಅವರೂ ಬರುತ್ತಾರೆ. ಅವರೂ ಒಪ್ಪಿಕೊಂಡು ಹಿಂದಕ್ಕೆ ಹೋಗಿರೋದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ತಮಿಳುನಾಡು ಮತ್ತು ಉತ್ತರ ಪ್ರದೇಶದವರು ಒಪ್ಪಿಕೊಳ್ಳಲಿಲ್ಲ.

ಶ್ರೀ ಸಿದ್ಧರಾಮಯ್ಯ: ಅದು ಒಂದೇ ರಾಜ್ಯ ಒಪ್ಪಿಕೊಂಡಿಲ್ಲ. ಅವರು ಒಪ್ಪಿಕೊಂಡಿದ್ದರೆ ನೀವು ಏನೋ ಹೇಳುತ್ತೀರಲ್ಲಾ. ಮಾನ್ಯ ಅಧ್ಯಕ್ಷರೇ, ನಾವು ತೀರ್ಮಾನ ಮಾಡಿದ್ದೇವೆ, ತಮಿಳುನಾಡಿನವರೂ ಬರುತ್ತಾರೆ ಅಂತ. This is the decision taken in the empowered committee. We are going by the decision. We are implementing the decision of the empowered Committee.

ಅಧ್ಯಕ್ಷರು: ಶ್ರೀ ಮೋಹನ ಕೃಷ್ಣ ಶೆಟ್ಟಿ.....ನೋ..... ದಯಮಾಡಿ ಜಗದೀಶ ಶೆಟ್ಟರೇ ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಜಗದೀಶ ಶೆಟ್ಟರ್: ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು: ಜಗದೀಶ ಶೆಟ್ಟರೇ ದಯಮಾಡಿ ಕುಳಿತುಕೊಳ್ಳಬೇಕು. ಈಗಾಗಲೇ 10 ನಿಮಿಷ ಈ ಪ್ರಶ್ನೆಗೆ ತೆಗೆದುಕೊಂಡಿದ್ದೀರಿ.

ಶ್ರೀ ಜಗದೀಶ ಶೆಟ್ಟರ್: ಯು.ಪಿ. ಯವರು ಒಪ್ಪುತ್ತಿಲ್ಲ.....

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ.....

(ಗೊಂದಲ)

ಅಧ್ಯಕ್ಷರು: ನೀವು ನೀವೇ ಮಾತನಾಡುವುದಾದರೆ ನಾವೇಕೆ ಇರಬೇಕು ಇಲ್ಲಿ? ನೋ..... ಮೋಹನ್ ಕೃಷ್ಣಶೆಟ್ಟಿ.....

ಸಾಮಾಜಿಕ ಭದ್ರತಾ ಯೋಜನೆ

201(2066) ಶ್ರೀ ಮೋಹನಕೃಷ್ಣಶೆಟ್ಟಿ (ಕುಮಟಾ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಮಾಜಿಕ ಭದ್ರತಾ ಯೋಜನೆಯ ಅಡಿಯಲ್ಲಿ ನಿರ್ಗತಿಕ ವಿಧವೆಯರಿಗೆ ಸರ್ಕಾರ ರೂ.10,000 ನೀಡುತ್ತಿದ್ದು ಈ ಯೋಜನೆಗೆ ಅನುದಾನದ ಕೊರತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ತೀರಾ ವಿಳಂಬವಾಗಿ ತಲುಪುವುದರಿಂದ ಫಲಾನುಭವಿಗಳಿಗೆ ಬಹಳ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಹೆಚ್ಚಿನ ಅನುದಾನ ನೀಡಿ ಫಲಾನುಭವಿಗಳಿಗೆ ದೊರಕುವ ಸವಲತ್ತನ್ನು ನಿರ್ದಿಷ್ಟ ಸಮಯದಲ್ಲಿ ನೀಡಲಾಗುವುದೆ?